ಮಾಡಿರುವುದರಿಂದ ಈ ರೀತಿಯ ಶಾಲೆಗಳಿಗೆ ಅನುದಾನವನ್ನು ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಸಿಬ್ಬಂದಿಗಳಿಗೆ ವೇತನವನ್ನು ನೀಡುವುದು ಆಡಳಿತ ಮಂಡಲಿಯ ಜವಾಬ್ದಾರಿಯಾಗಿರುತ್ತದೆ.

(2) ಡಾ॥ ಹೇಮಾರೆಡ್ಡಿ ಸಹ ನಿರ್ದೇಶಕರು, ಆರೋಗ್ಯ ಇಲಾಖೆ ಇವರ ಮೇಲಿನ ದೂರುಗಳು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಉಪಾಧ್ಯಕ್ಷರೆ, ಡಾ. ಹೇಮಾರೆಡ್ಡಿ, ನಿರ್ದೇಶಕರು, ಆರೋಗ್ಯ ಇಲಾಖೆ ಇವರ ಮೇಲೆ ಅನೇಕ ದೂರುಗಳ ಬಗ್ಗೆ ನಿಯಮ 351 ಮೇರೆಗೆ ಆರೋಗ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಅಧ್ಯಕ್ಷರೇ, ನಾನು ಇದನ್ನು ಓಡಿಬಿಡುತ್ತೇನೆ, ಏಪ್ರಿಲ್ 1993ನೇ ಇಸವಿಯ ಲಕ್ಷಾಂತರ ರೂಪಾಯಿಯ ಬೇಲೆ ಇರುವ ಮಾತ್ರೆಗಳನ್ನು ನಾಶಮಾಡಿದ್ದಕ್ಕೆ ಆರೋಗ್ಯ ಇಲಾಖೆಯಲ್ಲಿ ಜಂಟಿ ನಿರ್ದೇಶಕರಾಗಿ ಇದ್ದ ಡಾ॥ ಎಂ.ಬಿ. ಹೇಮಾರೆಡ್ಡಿ ವಿರುದ್ಧವಾಗಿ ಅನೇಕ ದೂರುಗಳು, ಅನೇಕ ಸಾಕ್ಷಿ ದಾಖಲೆಗಳು ಸರ್ಕಾರದ ಕೈಯಲ್ಲಿ ಇದ್ದು ಸರ್ಕಾರವು ವಿಚಾರಣೆಯನ್ನು ನಡೆಸಲಿಲ್ಲ. ಮಾರ್ಚ 1994 ರಂದು ಡಾ॥ ಹೇಮಾರೆಡ್ಡಿ ನಿರ್ದೇಶಕರು, ಆರೋಗ್ಯ ಇಲಾಖೆ. ಇವರಿಗೆ ಬೇಡದವರನ್ನು ಮತ್ತು ಇವರ ಮೇಲೆ ದೂರು ಕೊಟ್ಟವರನ್ನು ವರ್ಗಾಯಿಸಿ, ಗೋಳಾಡಿಸುತ್ತಿದ್ದಾರೆಂದು ದಿನಾಂಕ: 19-1-96ರಂದು ಕೆಲವು ಕನ್ನಡ ವಾರಪತ್ರಿಕೆಗಳಲ್ಲಿ ಬಂದಿದ್ದು, ಈ ಬಗ್ಗೆ ಸರ್ಕಾರ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಅಲ್ಲದೆ ಮತ್ತೆ ದಿನಾಂಕ: 24-2-96 ರಂದು ಹಾಗೂ 1-3-96ರಲ್ಲಿಯೂ ಇದೇ ಪತ್ರಿಕೆಯಲ್ಲಿ ಇವರ ಅವ್ಯವಹಾರಗಳ ಬಗ್ಗೆ ತಿಳಿಸಿದ್ದರೂ ನಿರ್ದೇಶಕರಾದ ಡಾ॥ ಹೇಮಾರೆಡ್ಡಿಯವರ ಮೇಲೆಸರ್ಕಾರ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಮತ್ತು ಡಾ॥ ಹೇಮಾರೆಡ್ಡಿ ವಿರುದ್ಧವಾಗಿ ಸಿವಿಲ್ ರೈಟ್ ಎನಫೋರ್ಸಮೆಂಟ್ ಸೆಲ್, ಸಿ.ಐ.ಡಿ. ವಿಭಾಗದವರು ವಿಚಾರಣೆಯನ್ನು ನಡೆಸಿರುವುದು ನಿಜವೇ ಮತ್ತು ಅಲ್ಲಿ ನಡೆಯುತ್ತಿರುವ ವಿಚಾರಣೆ ಯಾವುದು? ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್: 13ಎಸ್ ಬಿಇ : 85 ದಿನಾಂಕ 3-7-95ರ ಪ್ರಕಾರ ಡಾ॥ ಹೇಮಾರೆಡ್ಡಿಯವರನ್ನು ಕೂಡಲೇ ಅನುಮಾನತ್ತಿನಲ್ಲಿಟ್ಟು ಸರ್ಕಾರ ಏಕೆ ವಿಚಾರಣೆಯನ್ನು ಪ್ರಾರಂಭಿಸಿಲ್ಲ ಎಂಬ ಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬಕಲ್ಯಾಣ ಮಂತ್ರಿಗಳಿಂದ ಸ್ಪಷ್ಟೀಕರಣವನ್ನು ಅಪೇಕ್ಷಿಸುತ್ತೇನೆ.

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, 1996ರಲ್ಲಿ ಡಾ॥ ಎಂ.ಪಿ. ಹೇಮಾರೆಡ್ಡಿ ಸಹ ನಿರ್ದೇಶಕರು (ಕೃಷ್ಣ) ಈ ಹುದ್ದೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಜರ್ಮನ ಲೆಪ್ರಸಿ ಅಸೋಸಿಯೇಷನ್ ಜಿ.ಎಲ್.ಆರ್. ಮದ್ರಾಸಿನಿಂದ, ಉಚಿತವಾಗಿ ಬರುವ ಔಷಧಿಯನ್ನು ಬೇರೆ ಬೇರೆ ಜಿಲ್ಲೆಗಳಿಗೆ ಹಂಚಿ ಅಯ್ಯಾಯ ಜಿಲ್ಲೆಗಳಲ್ಲಿ ಉಪಯೋಗಿಸಲಾಗುತ್ತಿತ್ತು. ಈ ವಿಷಯವನ್ನು ಸಂಬಂಧಪಟ್ಟಂತಹ ಅಂತರರಾಷ್ಟ್ರೀಯ ಸಂಸ್ಥೆಯಿಂದ ಪ್ರತಿತಿಂಗಳ ಔಷಧಿಗಳ ದಾಸ್ತಾನುಗಳ ಲೆಕ್ಕ ಪತ್ರಗಳನ್ನು ಮಾಸಿಕವಾಗಿ ಪರಿಶೀಲನೆಯನ್ನು ಮಾಡಲಾಗುತ್ತಿತ್ತು. ಈ ವಿಚಾರದಲ್ಲಿ ಇದುವರೆವಿಗೂ ಯಾವ ದೂರುಗಳು ಬಂದಿಲ್ಲ. ಡೈಯಾಫಸಾಲ್ ಎಂಬ ಸ್ಥಳೀಯ ಮಾತ್ರೆ ಹೆಚ್ಚಾಗಿ ಸರಬರಾಜು ಆಗಿದ್ದು ರಾಜ್ಯದಲ್ಲಿ ಆ ಮಾತ್ರೆಗಳನ್ನು ಹೆಚ್ಚಾಗಿ ಉಪಯೋಗಿಸಲಾಗಿದೆ. ಭಾರತ

ಸರ್ಕಾರದೊಡನೆ ಪತ್ರ ವ್ಯವಹಾರವನ್ನು ಮಾಡಿ ಅವಧಿ ಮೀರಿದ ಮಾತ್ರೆಗಳನ್ನು ಭಾರತ ಸರ್ಕಾರದ ಅನುಮೋದನೆಯನ್ನು ಪಡೆದ ನಂತರ ನಿಷ್ಕ್ರೀಯ ಮಾಡಲಾಯಿತು. ದಿನಾಂಕ 19.1.1996, 24.2.1996, ಮತ್ತು 1.3.1996ರ ಹಾಯಬೆಂಗಳೂರು ಕನ್ನಡ ವಾರಪತ್ರಿಕೆಯಲ್ಲಿ ಪ್ರಕಟವಾಗಿರುವ ಎಲ್ಲಾ ಔಷಧಿಗಳು ನಿರ್ದಿಷ್ಟವಲ್ಲದ ನಿರಾಧಾರವಾದ ಸಂಗತಿಗಳಾಗಿರುತ್ತವೆ. ಸದರಿ ಪತ್ರಿಕೆಯಲ್ಲಿ ಪ್ರಕಟವಾಗಿರುವ ಔಷಧಿಗಳ ಹಿಂದೆ ಶ್ರೀ ಡಿ.ಟಿ.ರಾಜನ್, ಫಿಜಿಯೋಥೆರಪಿಸ್ಟ ಎಂಬ ವ್ಯಕ್ತಿಯ ಪ್ರಚೋದನೆ ಇರಬಹುದು. ಶ್ರೀ ಡಿ. ಟಿ. ರಾಜನ್, ಫಿಜಿಯೋಥೆರಪಿ ಕುಷ್ಠರೋಗ ನಿಯಂತ್ರಣ ಕೇಂದ್ರ, ನೆಲಮಂಗಲ, ಇವರು ತಮ್ಮ ವರ್ಗಾವಣೆಯಾದ ನಂತರ ಇತರ ಅಂಶಗಳ ಬಗ್ಗೆ ನಾಗರೀಕರ ಹಕ್ಕು ರಕ್ಷಣ ಸೆಲನ ಸಿ.ಐ.ಡಿ. ವಿಭಾಗವು ಒಂದು ಮನವಿಯನ್ನು ಸಲ್ಲಿಸಿದ್ದು, ಈ ಬಗ್ಗೆ ನಿರ್ದೇಶಕರ ಅಭಿಪ್ರಾಯವನ್ನು ಕೋರಲಾಗಿದೆ. ಇವರು ಎಲ್ಲಾ ದೂರುಗಳನ್ನು ಸಲ್ಲಿಸಿ ತಮ್ಮ ಉದ್ದೇಶವನ್ನು ಸಾಧಿಸುವಂತಹ ಪ್ರವೃತ್ತಿಯನ್ನು ಹೊಂದಿರುತ್ತಾರೆ. ಈ ನೌಕರುಗಳ ವರ್ಗಾವಣೆ ಮತ್ತು ಇನ್ನು ಇತರ ವಿಚಾರಗಳಲ್ಲಿ ಅರ್ಜಿಗಳನ್ನು ಬರೆದು ಮೇಲಾಧಿಕಾರಿಗಳ ಜೊತೆಯಲ್ಲಿ ಅಸಭ್ಯವಾಗಿ ವರ್ತಿಸುವುದು ಹಾಗೂ ಅಸಹಾನಿಯವಾಗಿ ನಡೆದುಕೊಳ್ಳುವುದು ವಿಚಾರದಲ್ಲಿ ಲೋಕಾಯುಕ್ತ ವಿಚಾರಣೆ ನಡೆಸಿ, ಸದರಿ ನೌಕರುಗಳ ಮೇಲೆ ಸೂಕ್ತ ಶಿಸ್ತಿನ ಕ್ರಮವನ್ನು ಜರೂರಿಸಲು ನಿವೇದಿಸಿದೆ. ಡಾ.ಎಂ.ಪಿ.ಹೇಮಾರೆಡ್ಡಿ, ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಮೇಲೆ ಮಾಡಿರತಕ್ಕಂತಹ ಎಲ್ಲಾ ದೂರುಗಳು ಸತ್ಯಕ್ಕೆ ದೂರವಾಗಿದೆ.

(3) ರೋಣ ತಾಲ್ಲೂಕಿನ ರೋಣ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ.

ಶ್ರೀ ಶ್ರೀಶೈಲಪ್ಪ ವಿರೂಪಾಕ್ಷಪ್ಪ ಬಿದನೂರು(ರೋಣ) ಮಾನ್ಯ ಉಪಾಧ್ಯಕ್ಷರೆ, ರೋಣ ತಾಲ್ಲೂಕಿನ, ರೋಣ ಸರ್ಕಾರಿ ಪ್ರಥಮ ದರ್ಜೆಯ ಕಾಲೇಜಿನ ಕಟ್ಟಡ ಕೇವಲ ಒಂದು ಬೋಧನ ಕೊಠಡಿಯನ್ನು ಕಟ್ಟಡವನ್ನು ಕಟ್ಟಲು ಪ್ರಾರಂಭಿಸಲಾಗಿದೆ. ಇದರ ಅವಶ್ಯಕತೆಯಷ್ಟು ಅವಶ್ಯಕತೆಯನ್ನು ಪೂರೈಸಲು ಸರ್ಕಾರದ ಗಮನಕ್ಕೆ ಬಂದಿದೆಯೇ? ಪೂರ್ಣ ಪ್ರಮಾಣದ ಎರಡನೇಯ ಮಹಡಿಯನ್ನು ಕಟ್ಟುವ ವಿಚಾರ ಸರ್ಕಾರಕ್ಕೆ ಇದೆಯೇ? 1996-97ನೇ ಸಾಲಿನ ಅವಶ್ಯಕತೆಗೆ ಅನುಗುಣವಾಗಿ ಬೋಧನ ಕೊಠಡಿಗಳನ್ನು ನಿರ್ಮಾಣ ಮಾಡುವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುತ್ತದೆಯೇ?

ಶ್ರೀ ಡಿ.ಮಂಜುನಾಥ್ (ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ. ರೋಣ ತಾಲ್ಲೂಕಿನ ರೋಣ ಪ್ರಥಮ ದರ್ಜೆಯ ಕಾಲೇಜಿನ ಮೊದಲನೆಯ ಹಂತದ ಕಟ್ಟಡವನ್ನು ಕಟ್ಟಿ ಮೂಗಿದಿದೆ. ಲೋಕೋಪಯೋಗಿ ಇಲಾಖೆಯು ಸದರಿ ಕಾಲೇಜಿನ ಎರಡನೆಯ ಹಂತದ ಕಟ್ಟಡವನ್ನು ಕಟ್ಟಲು ಅಂದಾಜು ವೆಚ್ಚ ಮತ್ತು ನಕ್ಷೆಯನ್ನು ಸಿದ್ಧಪಡಿಸಿ 1996-97ನೆಯ ಅಯವ್ಯಯದಲ್ಲಿಯು ಸಾಧ್ಯವಾದಷ್ಟು ಅನುದಾನವನ್ನು ಒದಗಿಸಿಕೊಂಡು ಅವಶ್ಯಕತೆಗೆ ಅನುಗುಣವಾಗಿ ಬೋಧನ ಕೊಠಡಿಗಳನ್ನು ನಿರ್ಮಿಸಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

(4) ಬೆಂಗಳೂರಿನ ಕಾವಲ್ ಬೈರಸಂದ್ರ ಸರ್ಕಾರಿ ವಸತಿ ಗೃಹಗಳಿಗೆ ಪ್ರತ್ಯೇಕ ನೀರಿನ ಮೀಟರ್ ಅಳವಡಿಸುವ ಬಗ್ಗೆ.

ಶ್ರೀ ರಾಮಲಿಂಗಾರೆಡ್ಡಿ (ಜಯನಗರ ಕ್ಷೇತ್ರ) : ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿರುವ ಕಾವಲ್

9521-49